ಗುರುವಾರ, 7 ಡಿಸೆಂಬರ್ 2017 | ಪುಟಗಳು: 16+4+4 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 131
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |
PRID
VK
ವಿಜಯ ಕರ್ನಾಟಕ

CENTRAL LIBRARY



ಕಲ್ಯಾಣಮಸ್ತು: ಮುಂದಿನ ವಾರ ಇಟಲಿಯಲ್ಲಿ ವಿರಾಟ್ ಕೊಹ್ಲಿ-ಅನುಷ್ಕಾ ಶರ್ಮ ಮದುವೆ? P14

ಮಹಾರಾಷ್ಟ್ರದ ಗಡಚಿರೋಲಿ ಅರಣ್ಯದಲ್ಲಿ ಎನ್‌ಕೌಂಟರ್: ಐವರು ಮಹಿಳೆಯರ ಸಹಿತ 7 ನಕ್ಸಲರು ಹತ P12

ರಾಹುಲ್ ಗಾಂಧಿ ಬಾಬರ್ ಭಕ್ತ, ಖಿಲ್ಜಿ ಸಂಬಂ
ಬಿಜೆಪಿ ವಕ್ತಾರನ ವಿವಾದಾತ್ಮಕ ಹೇಳಿಕೆ P12

**ಪ್ರವೇಶ ಕುಂಠಿತ**

# ರಾಜ್ಯದ 11 ಎಂಜಿನಿಯರಿಂಗ್ ಕಾಲೇಜಿಗೆ ಬೀಗ?

## ದ.ಕ ದಲ್ಲೂ ಒಂದು ಕಾಲೇಜು ಮುಚ್ಚುವ ಭಯ | ದೇಶದಲ್ಲಿ 300 ಕಾಲೇಜುಗಳು ರದ್ದತಿಗೆ ಎಐಸಿಟಿಇ ಕ್ರಮ

**ಸ್ಟೀವನ್ ರೇಗೊ**, ಮಂಗಳೂರು

ಮುಂದಿನ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕದ 11 ಎಂಜಿನಿಯರಿಂಗ್ ಕಾಲೇಜುಗಳು ಸೇರಿದಂತೆ ದೇಶದ 300 ಕಾಲೇಜುಗಳು ಬಂದ್ ಆಗುವ ಅಪಾಯವಿದೆ.

ಈ ಕುರಿತು ಕೇಂದ್ರ ಸರಕಾರದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಶಿಕ್ಷಣ ಪರಿಷತ್ (ಎಐಸಿಟಿಇ) ದಿಟ್ಟ ಕ್ರಮವನ್ನು ಕೈಗೊಳ್ಳುವ ಮೂಲಕ ತನ್ನ ಅಂತರ್ಜಾಲ ಪುಟದಲ್ಲೂ ಇದನ್ನು ಪ್ರಕಟಿಸುವ ಕಾರ್ಯ ಮಾಡಿದೆ. ಕರ್ನಾಟಕವೊಂದರಲ್ಲಿ ಈ ಬಾರಿ 19 ಸಾವಿರದಷ್ಟು ಎಂಜಿನಿಯರಿಂಗ್ ಸೀಟುಗಳು ಖಾಲಿ ಬಿದ್ದಿವೆ ಎನ್ನುವ ಮಾಹಿತಿಯನ್ನು ಪಡೆದುಕೊಂಡ ಎಐಸಿಟಿಇ ಇಂತಹ ಕಾರ್ಯಕ್ಕೆ ಮುಂದಾಗಿದೆ.

ಅಂದಹಾಗೆ 2016-17ನೇ ಸಾಲಿನಲ್ಲಿ 15,561 ಸೀಟುಗಳು ಖಾಲಿ ಉಳಿದಿತ್ತು . ಈ ಬಾರಿ ಎಂದರೆ 2017-18ರ ಸಾಲಿನಲ್ಲಿ 19,407 ಸೀಟುಗಳು ಖಾಲಿ ಉಳಿದಿವೆ. ಈ ಮೂಲಕ ರಾಜ್ಯದಲ್ಲಿ ಎಂಜಿನಿಯರಿಂಗ್ ಪದವಿಗೆ ಸೇರುವ ವಿದ್ಯಾರ್ಥಿ ಗಳು ಎಂಜಿನಿಯರಿಂಗ್ ವಿಚಾರದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಎಐಸಿಟಿಇ ಹೊರಬಿಟ್ಟಿದೆ.

ಕಳೆದ ಐದು ವರ್ಷಗಳಲ್ಲಿ ಶೇ.30ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳು ಸೇರ್ಪಡೆಯಾಗಿರುವ ಈ ಕಾಲೇಜುಗಳಿಗೆ ಮುಂದಿನ ಶೈಕ್ಷಣಿಕ ವರ್ಷ (2018-19)ಕ್ಕೆ ವಿದ್ಯಾರ್ಥಿಗಳನ್ನು ಸೇರ್ಪಡೆಗೊಳಿಸಬಾರದು ಎಂದು ಎಐಸಿಟಿಇ ಸೂಚನೆ ನೀಡಿದೆ.

**ರಾಜ್ಯದ ಹತ್ತು , ದ.ಕದ ಒಂದು:** ದೇಶದಲ್ಲಿರುವ 3 ಸಾವಿರ ಎಂಜಿನಿಯರಿಂಗ್ ಕಾಲೇಜುಗಳಿಗೆ 13.56 ಲಕ್ಷ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ನೀಡಲಾ ಗುತ್ತಿದೆ. ಉಳಿದಂತೆ 800 ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸೇರ್ಪಡೆಯಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಶೇ.50ಕ್ಕಿಂತಲೂ ಕಡಿಮೆಯಾಗಿದೆ. ಇಂತಹ 300 ಕಾಲೇಜುಗಳ ಪೈಕಿ 150ರಲ್ಲಂತೂ ಶೇ 20ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯುತ್ತಿದ್ದಾರೆ.

ರಾಜ್ಯದ ಹುಬ್ಬಳ್ಳಿ ಎರಡು, ಬೆಂಗಳೂರಿನ ಏಳು, ಬಳ್ಳಾರಿ ಒಂದು ಹಾಗೂ ದ.ಕ ಒಂದು ಎಂಜಿನಿಯರಿಂಗ್ ಕಾಲೇಜು ಈ ಬೀಗ ಜಡಿಯುವ ಪ್ರಕ್ರಿಯೆ ಸಾಲಿನಲ್ಲಿರುವ ಕಾಲೇಜು ಎಂದು ಎಐಸಿಟಿಇ ತನ್ನ ಅಂತರ್ಜಾಲದಲ್ಲಿ ಪ್ರಕಟಿಸಿದೆ. ಉಳಿದಂತೆ ದೇಶದ 300 ಕಾಲೇಜುಗಳು ಕೂಡ ಈ ಡಿಲೀಟ್ ಲಿಸ್ಟ್‌ನ ಪಟ್ಟಿಯಲ್ಲಿ ಕಾಣಿಸಿಕೊಂಡಿದೆ.

**ಎಂಜಿನಿಯರಿಂಗ್ ಕಾಲೇಜು**



### ಉದ್ಯೋಗ ಕಡಿತ, ವಿದ್ಯಾರ್ಥಿಗಳಿಗೆ ಭಯ

ಎಂಜಿನಿಯರಿಂಗ್ ಓದಿದರೆ ಕೆಲಸ ಸಿಗುವುದಿಲ್ಲ ಎಂಬ ಭಾವನೆ ವಿದ್ಯಾರ್ಥಿಗಳನ್ನು ಕಾಡುತ್ತಿದೆ. ಅದಲ್ಲದೆ ನೋಟ್ ಬ್ಯಾನ್, ಜಿಎಸ್‌ಟಿಯಂತಹ ಕೇಂದ್ರ ಸರಕಾರದ ಹೊಸ ಯೋಜನೆಗಳಿಂದ ಇತ್ತೀಚೆಗೆ ಐಟಿ (ಮಾಹಿತಿ ತಂತ್ರಜ್ಞಾನ) ಕ್ಷೇತ್ರದಲ್ಲೂ ಹೊಸ ನೇಮಕಾತಿ ಅಷ್ಟಾಗಿ ಆಗುತ್ತಿಲ್ಲ, ಉದ್ಯೋಗ ಕಡಿತ ಕೂಡ ಜತೆಯಾಗುತ್ತಿರುವುದು ಎಂಜಿನಿಯರಿಂಗ್ ಮಾಡಲು ಯತ್ನಿಸುತ್ತಿರುವ ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದೆ. ಕೆಲವೊಂದು ಕಾಲೇಜುಗಳಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗೆ ವಿದ್ಯಾರ್ಥಿಗಳ ಸಂಖ್ಯೆ ಕಳೆದ ಐದು ವರ್ಷಗಳಲ್ಲಿ ಇಳಿಕೆಯಾಗುತ್ತಿದೆ ಎನ್ನುವ ಮಾಹಿತಿಯನ್ನು ಮಂಗಳೂರಿನ ಎಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ .ವಿಲಿಯಂ ಡಿಕೋಸ್ತಾ ಅವರ ಮಾತು.

ಒಟ್ಟಾರೆಯಾಗಿ ಎಂಜಿನಿಯರಿಂಗ್ ಪದವಿಗೆ ದಾಖಲಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಇಳಿಯುತ್ತಾ ಹೋದಂತೆ ಎಂಜಿನಿಯರಿಂಗ್ ಕಾಲೇಜುಗಳಿಗೂ ಹೊಡೆತ ಬೀಳುವ ಸಾಧ್ಯತೆಗಳು ಹೆಚ್ಚಾಗಲಿದೆ.

ಗುರುವಾರ, 7 ಡಿಸೆಂಬರ್ 2017 | ಪುಟಗಳು: 16+4+4 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 131
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |
VK
ವಿಜಯ ಕರ್ನಾಟಕ

CENTRAL LIBRARY



ಕಲ್ಯಾಣಮಸ್ತು: ಮುಂದಿನ ವಾರ ಇಟಲಿಯಲ್ಲಿ ವಿರಾಟ್ ಕೊಹ್ಲಿ-ಅನುಷ್ಕಾ ಶರ್ಮ ಮದುವೆ? P14

ಮಹಾರಾಷ್ಟ್ರದ ಗಡಚಿರೋಲಿ ಅರಣ್ಯದಲ್ಲಿ ಎನ್‌ಕೌಂಟರ್: ಐವರು ಮಹಿಳೆಯರ ಸಹಿತ 7 ನಕ್ಸಲರು ಹತ P12

ರಾಹುಲ್ ಗಾಂಧಿ ಬಾಬರ್ ಭಕ್ತ, ಖಿಲ್ಜಿ ಸಂಬಂಧಿ: ಬಿಜೆಪಿ ವಕ್ತಾರನ ವಿವಾದಾತ್ಮಕ ಹೇಳಿಕೆ P12

# ಭವಿಷ್ಯನಿಧಿ ಮಾಹಿತಿಗೆ ಉಮಂಗ್

## ನೌಕರರ ಅನುಕೂಲಕ್ಕಾಗಿ ಡಿಜಿಟಲ್ ಇಂಡಿಯಾ ಯೋಜನೆ

**ವಿಜಯ ಕೋಟ್ಯಾನ್** ಮಂಗಳೂರು

ಕೇಂದ್ರ ಸರಕಾರದ ನಾನಾ ಸೇವಾ ಯೋಜನೆಗಳ ಸಂಪೂರ್ಣ ಮಾಹಿತಿಯನ್ನು ನೀಡಬಲ್ಲ ಉಮಂಗ್ ಆ್ಯಪ್‌ನಲ್ಲಿ ಇದೀಗ ಭವಿಷ್ಯನಿಧಿ (ಪ್ರಾವಿಡೆಂಟ್ ಫಂಡ್) ಸಂಬಂಧಿತ ಮಾಹಿತಿಗಳು ಕೂಡಾ ಸಿಗಲಿದ್ದು, ಇದರಿಂದ ಕಾರ್ಮಿಕ ವರ್ಗಕ್ಕೆ ಹೆಚ್ಚು ಅನುಕೂಲವಾಗಲಿದೆ.





ಮೊಬೈಲ್ ಆ್ಯಪ್‌ನಲ್ಲಿ ಭವಿಷ್ಯನಿಧಿಗೆ ಸಂಬಂಧಿತ ಪಾಸ್‌ಬುಕ್ ವಿವರ, ಕ್ಲೈಮ್, ಭವಿಷ್ಯನಿಧಿ ವರ್ಗಾವಣೆ ಸೇರಿದಂತೆ ನಾನಾ ಸೌಲಭ್ಯಗಳನ್ನು ನೀಡಲಾಗಿದೆ. ಇದರಿಂದ ಪ್ರತಿ ತಿಂಗಳು ಸಿಬ್ಬಂದಿಗೆ ಭವಿಷ್ಯ ನಿಧಿಗೆ ಸೇರ್ಪಡೆಯಾದ ಹಣ ಮತ್ತು ಬಡ್ಡಿ ಸಂಬಂಧಿತ ವಿವರಗಳು ಸಿಗಲಿದೆ ಎನ್ನುತ್ತಾರೆ ಭವಿಷ್ಯ ನಿಧಿ ಪ್ರಾಂತೀಯ ಕಚೇರಿ ಅಧಿಕಾರಿಗಳು ತಿಳಿಸಿದ್ದಾರೆ.

**ಪಿಎಫ್ ವರ್ಗಾಯಿಸಿ:** ಯಾವುದೇ ಒಬ್ಬ ಸಿಬ್ಬಂದಿ ಒಂದು ಕಂಪನಿಯಲ್ಲಿ ಕೆಲಸ ಮಾಡಿ, ಇನ್ನೊಂದು ಕಂಪನಿಗೆ ವರ್ಗಾವಣೆಯಾದರೆ ಈ ಹಿಂದಿನ ಪಿಎಫ್ ಖಾತೆಯಲ್ಲಿರುವ ಹಣವನ್ನು ತೆಗೆಯದೆ ಹೊಸ ಕಂಪನಿಗೆ ವರ್ಗಾವಣೆ ಮಾಡುವತ್ತ ಗಮನಹರಿಸಬೇಕು. ಇದರಿಂದ ಮುಂದೆ ಪೆನ್ಷನ್ ಯೋಜನೆ ಅನುಕೂಲ ಮಾತ್ರವಲ್ಲದೆ ಮದುವೆ, ಹೊಸ ಮನೆ ನಿರ್ಮಾಣದ ಸಾಲ ಸೌಲಭ್ಯಕ್ಕೆ ವಿಶೇಷ ಅನುಕೂಲ ಸಿಗಲಿದೆ. ಈ ಬಗ್ಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಡಿ.1ರಿಂದ ಡಿ.31ರವರೆಗೆ ದೇಶಾದ್ಯಂತ ಭವಿಷ್ಯ ಕಚೇರಿಯಿಂದ ಸಾಮಾಜಿಕ ಜಾಗೃತಿಕ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಒಂದು ತಿಂಗಳ ಕಾರ್ಯಾಗಾರದಲ್ಲಿ ಕಂಪನಿ ಗಳಿಗೆ ಸುತ್ತೋಲೆ ಹೊರಡಿಸಿ, ಮಾಹಿತಿ ನೀಡಲು ನಿರ್ಧರಿಸಲಾಗಿದೆ. ಕಂಪನಿ ಮುಖ್ಯಸ್ಥರನ್ನು ಕಚೇರಿಗೆ ಕರೆಸಿ ಮಾಹಿತಿ ನೀಡಲಾಗುವುದು ಎಂದು ಕಚೇರಿ ಮೂಲಗಳು ತಿಳಿಸಿವೆ.

**ವಿಶೇಷತೆ:** ಈ ಆ್ಯಪ್‌ನಲ್ಲಿ 33 ಇಲಾಖೆ ಮತ್ತು 4 ರಾಜ್ಯಗಳ 162 ಸೇವೆಗಳು ಲಭ್ಯ. 13 ಭಾಷೆಗಳಲ್ಲಿ ವ್ಯವಹರಿಸಲು ಸಾಧ್ಯ. ಮೊಬೈಲ್, ಗ್ಯಾಸ್, ಎಲೆಕ್ಟ್ರಿಸಿಟಿ ಬಿಲ್, ಆಧಾರ್, ಪಿಎಂಕೆವಿವೈ, ಪಾಸ್‌ಪೋರ್ಟ್, ಸಿಬಿಎಸ್‌ಇ, ಎಐಸಿಟಿಇ, ತೆರಿಗೆ ಸಂಬಂಧಿತ ಮಾಹಿತಿ, ಸೇವೆ ಪಡೆದುಕೊಳ್ಳಲು ಸಾಧ್ಯ.